**ದಿಃ28.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ ಃ**

ಅಪಘಾತ ಕಾಲಕ್ಕೆ ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ. ಅಪಘಾತ ಸಂಬಂಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಮಹಜರ್, ನಕಾಶೆ ಇತ್ಯಾದಿಗಳನ್ನು ಆಧಾರಿಸಿ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಮಡಿಕೇರಿಯಿಂದ ಕುಶಾಲನಗಕ್ಕೆ ಹೋಗುವ ರಸ್ತೆಯ ಯಾವ ಭಾಗದಲ್ಲಿ ವಿಥಾಲಿ ವಿವ್ ಹೊಟೇಲ್ ಇದೆ ಎಂದರೆ ಸಾಕ್ಷಿ ರಸ್ತೆಯ ದಕ್ಷಿಣ ದಿಕ್ಕಿಗೆ ಇದೆ ಎನ್ನುತ್ತಾರೆ. ನಿಮ್ಮ ಗಂಡ ಅಪಘಾತ ಕಾಲಕ್ಕೆ ರಸ್ತೆಯ ಯಾವಭಾಗದಲ್ಲಿ ನಡೆದುಕುಂಡು ಬರುತ್ತಿದ್ದರು ಎಂದರೆ ಸಾಕ್ಷಿ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿಗೆ ರಸ್ತೆ ದಾಟಿ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ ಎನ್ನುತ್ತಾರೆ. ನನ್ನ ಗಂಡನಿಗೆ ಬುಲೆರೊ ನಿಯೊ ಕಾರ್ ಡಿಕ್ಕಿ ಹೊಡಿಸಿದ್ದರಿಂದ ಈ ಅಪಘಾತ ಸಂಭವಿಸಿದೆ. ಅಪಘಾತ ಕಾಲಕ್ಕೆ ಅಪಾಧಿತ ಕಾರು ಕುಶಾಲನಗರ ಕಡೆಯಿಂದ ಮಡಿಕೇರಿ ಕಡೆ ಬರುತ್ತಿತ್ತು. ಕಾರು ಅಪಘಾತ ಸ್ಥಳಕ್ಕೆ ತುಂಬಾ ಹತ್ತಿರ ಬಂದಾಗ ನನ್ನ ಗಂಡ ರಸ್ತೆಯ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿಗೆ ಹೋಗಿದ್ದಾರೆ ಎಂದರೆ ಸಾಕ್ಷಿ ನನ್ನ ಗಂಡ ರಸ್ತೆಯ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿಗೆ ಹೊಗಿ ನಡೆದುಕೊಂಡು ಬರುತ್ತಿದ್ದಾಗ ಕಾರು ನನ್ನ ಗಂಡನಿಗೆ ಡಿಕ್ಕಿ ಹೊಡೆಸಿದೆ ಎನ್ನುತ್ತಾರೆ. ನಿಪಿ.4 ರ ಸ್ಥಳ ಮಹಜರ್ ನ್ನು ನಾನೆ ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಮತ್ತು ಅದರಲ್ಲಿ ಬರೆದಿರುವ ವಿಚಾರಗಳು ಸರಿ ಇರುತ್ತದೆ. ನಿಪಿ.4 ರ ಜೊತೆ ಇರುವ ನಾಕಶೆಯನ್ನು ಸಹ ನಾನೇ

ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಪೊಲೀಸರು ದೋಷಾರೋಪಣಾ ಪತ್ರದ ಜೊತೆ ಸಲ್ಲಿಸಿದ್ದನ್ನು ತಂದು ಹಾಜರು ಮಾಡಿದ್ದೇನೆ ಎನ್ನುತ್ತಾರೆ. ನಕಾಶೆಯಲ್ಲಿ ತೋರಿಸಿರುವ ವಿಚಾರಗಳು ಸತ್ಯವಾಗಿರುತ್ತವೆ. ನಕಾಶೆಯಲ್ಲಿ ವಿವರಿಸಿರುವಂತೆ ಅಪಘಾತ ಸ್ಥಳದಿಂದ ರಸ್ತೆಯ ದಕ್ಷಿಣ ಅಂಚು ಎಂಟುವರೆ ಅಡಿ ಅಂತರ ಇದೆ ಎಂದರೆ ಸಾಕ್ಷಿ ನನಗೆ ಖುದ್ದು ಮಾಹಿತಿ ಇಲ್ಲ ಆದರೆ ಪೊಲೀಸರು ಆ ರೀತಿ ಬರೆದಿದ್ದಾರೆ ಎನ್ನುತ್ತಾರೆ. ನಿಪಿ.4 ರ ಜೊತೆ ಇರುವ ನಕಾಶೆಯಲ್ಲಿ ಅಪಘಾತ ಸ್ಥಳವನ್ನು ರಸ್ತೆ ಮಧ್ಯದ ಭಾಗದಲ್ಲಿ ಗುರುತಿಸಲಾಗಿದೆ ಎಂದರೆ ಸಾಕ್ಷಿ ಪೊಲೀಸರು ಅದನ್ನು ತಯಾರಿಸಿದ್ದಾರೆ ಎನ್ನುತ್ತಾರೆ. ನನ್ನ ಗಂಡನ ಜೊತೆ ಇದ್ದ ಸತೀಷ್ ಇವರು ಅಪಘಾತವನ್ನು ಖುದ್ದು ನೋಡಿದ್ದಾರೆ. ಸದರಿಯವರು ಪೊಲೀಸರಿಗೆ ಮಾಹಿತಿ ಕೊಟ್ಟು ನಿಪಿ.4 ರಂತೆ ಮಹಜರ್ ಮತ್ತು ನಕಾಶೆಯನ್ನು ಬರೆಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸತೀಷ್ ಈತ ತೋಟದ ಮ್ಯಾನೇಜರ್ ಎನ್ನುತ್ತಾರೆ. ತೋಟದ ಮ್ಯಾನೇಜರ್ ಸತೀಷ್ ರವರವೇ ಅಪಘಾತ ಸಂಬಂಧ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಅಪಾಧಿತ ವಾಹದ ಯಾವ ಭಾಗ ನನ್ನ ಗಂಡನಿಗೆ ಡಿಕ್ಕಿ ಹೊಡೆಸಿದೆ ಎಂದು ನನಗೆ ಮಾಹಿತಿ ಇಲ್ಲ. ವಾಹನ ಮುಂದೆ ಹೋದಾಗ ನನ್ನ ಗಂಡ ಓಡಿಕೊಂಡು ಬಂದು ವಾಹನಕ್ಕೆ ತಗುಲಿದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅಪಘಾತ ಸ್ಥಳದಲ್ಲೆ ನನ್ನ ಗಂಡ ಬಿದ್ದರು ಎಂದರೆ ಸರಿ. ನನ್ನ ಗಂಡ ಓಡಿಬಂದು ಅಪಾಧಿತ ವಾಹಕ್ಕೆ ತಾಗಿಸಿಕೊಂಡು

ಬಿದ್ದಿದ್ದು ವಾಹನ ಚಾಲಕನ ಗಮನಕ್ಕೆ ಬಾರದೆ ಇದಿದ್ದರಿಂದ ಆತ ಮುಂದೆ ಹೋಗಿದ್ದಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಗಂಡ ಓಡಿ ಬಂದು ಅಪಾಧಿತ ವಾಹಕ್ಕೆ ತಾಗಿಸಿಕೊಂಡಾಗ ಅವರ ಬಲಗೈ ಜೀಪಿನ ಭಾಗಕ್ಕೆ ತಗಲಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆಗ ನನ್ನ ಗಂಡ ಅಂಗಾತವಾಗಿ ಬಿದ್ದರು ಎಂದರೆ ಸಾಕ್ಷಿ ನಾನು ಖುದ್ದು ಅಪಘಾತವನ್ನು ನೋಡಿಲ್ಲ ಆದರೆ ನೋಡಿದವರು ಅಪಘಾತ ಹೇಗೆ ಸಂಭವಿಸಿದೆ ಎಂದು ಹೇಳಿದರು ಎನ್ನುತ್ತಾರೆ. ಆ ರೀತಿ ನನ್ನ ಗಂಡ ಬಿದ್ದಾಗ ತಲೆಯ ಹಿಂಭದಿಗೆ, ಮೊನಕೈಗೆ ಮತ್ತು ಇತರ ಭಾಗಕ್ಕೆ ಪೆಟ್ಟಾಗಿತ್ತು ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ನೋಡಿದಾಗ ಗಾಯ ಆಗಿದ್ದು ಕಂಡು ಬಂತು ಎನ್ನುತ್ತಾರೆ. ನನ್ನ ಗಂಡ ಅಜಾಗರೂಕತೆಯಿಂದ ಒಮ್ಮೆಲೆ ಓಡಿ ಬಂದು ಜೀಪಿಗೆ ತಾಗಿಸಿಕೊಂಡಿದ್ದರಿಂದ ಈ ಅಪಘಾತ ಸಂಭವಿಸಿದೆ ಹೊರೆತು ಜೀಪಿ ಚಾಲಕನ ತಪ್ಪಿನಿಂದಾಗಿ ಈ ಅಪಘಾತ ಸಂಭವಿಸಿಲ್ಲ ಎಂದರೆ ಸಾಕ್ಷಿ ನಾನು ಅಪಘಾತ ನೋಡಿಲ್ಲ ಆದರೆ ನೋಡಿದವರು ನನ್ನ ಗಂಡ ರಸ್ತೆ ದಾಟಿ ಬರುತ್ತಿದ್ದಾಗ ಈ ಅಪಘಾತ ಸಂಭವಿಸಿದೆ ಎಂದು ಹೇಳಿದರು ಎನ್ನುತ್ತಾರೆ. ಈ ಅಪಘಾತ ನನ್ನ ಗಂಡನ ನಿರ್ಲಕ್ಷತಣದಿಂದ ಸಂಭವಿಸಿರುವುದರಿಂದ 2ನೇ ಎದುರುದಾರರ ಸಂಸ್ಥೆ ಯಾವುದೇ ಪರಿಹಾರ ಕೊಡಲು ಭಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಎಸ್ಟೇಟ್ ನಲ್ಲಿ ರೈಟರ್ ಕೆಲಸ ಮಾಡುತ್ತಿದ್ದರು ಸದರಿಯವರಿಗೆ ತಿಂಗಳಿಗೆ 18 ಸಾವಿರ ರೂ ವೇತನ ಇತ್ತು. ಸಾಕ್ಷಿ ಮುಂದುವರೆದು ಇತರ ಭತ್ಯೆಯಲ್ಲ ಸೇರಿ ಅವರಿಗೆ ತಿಂಗಳಿಗೆ 30 ಸಾವಿರ ವರಮಾನ ಇತ್ತು ಎನ್ನುತ್ತಾರೆ. ನನ್ನ ಗಂಡನಿಗೆ

ನಿವ್ವಳ ವೇತನ 18 ಸಾವಿರ ಇತ್ತು ಎಂದರೆ ಸರಿ. ನನ್ನ ಗಂಡನಿಗೆ ವಿದ್ಯುತ್ ಬಿಲ್ಲು ಇತ್ಯಾದಿ ಭತ್ಯೆಗಳನ್ನು ಕೊಡಲಾಗುತ್ತಿತ್ತು. ಇತರೆ ಭತ್ಯೆಗಳನ್ನು ಸೇರಿ ನನ್ನ ಗಂಡನಿಗೆ 30 ಸಾವಿರ ವರಮಾನ ಇತ್ತು ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ಶ್ರೀ.ಬಿ.ಎಂ.ಎಸ್. ವಕೀಲರಿಂದ ಃ**

2ನೇ ಎದುರುದಾರರ ಪರ ವಕೀಲರು ಮಾಡಲಾಗದ ಪಾಟಿ ಸವಾಲನ್ನು 1ನೇ ಎದುರುದಾರರ ಪರ ವಕೀಲಸರು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.